ಫಳ ಹೊಳೆಯುತ್ತಿದ್ದವು. ಇದನ್ನೆಲ್ಲಾ ನೋಡುತ್ತಲೇ ಯಾವ ಗಿಡದಲ್ಲಿ ಹೂವುಗಳು ಹೆಚ್ಚಾಗಿ ಬಿಟ್ಟಿವೆ! ಯಾವು ಹೂವುಗಳು ಸುಲಭವಾಗಿ ಕೈಗೆ ಸಿಗುತ್ತವೆ ಎಂದು ಲೆಕ್ಕ ಹಾಕಿಕೊಳ್ಳುತ್ತಿದ್ದೆ. ಆಗಿನ ನನ್ನ ವಯೋಮಾನದಲ್ಲಿ ತೋಟದ ಹೂವುಗಳೆಲ್ಲಾ ನನ್ನ ದೇವರಿಗೆ ಮಾತ್ರ ಸೇರಿದ್ದು ಎಂದು ಭಾವಿಸಿದ್ದೆ. ಈ ಹೂವುಗಳನ್ನು ಸಮರ್ಪಿಸಿಕೊಂಡ ದೇವರ ಅನುಗ್ರಹಕ್ಕೆ ಪಾತ್ರರಾಗಿರುವವರಲ್ಲಿ ನಾನು ಮೊದಲಿಗನಾಗುತ್ತೇನೆ ಎಂಬ ಭಾವನೆಯೂ ನನ್ನದಾಗಿತ್ತು.

ತಡಿಕೆ ಬಾಗಿಲು ತಗೆದಕೂಡಲೇ ಯಾರು ನುಗ್ಗಿ ಮುಂದೆ ಹೋಗುತ್ತಾರೋ ಅವರಿಗೇ ಹೆಚ್ಚು ಹೂವುಗಳು ಸಿಗುತ್ತಿದ್ದವು. ಹೀಗಾಗಿ, ಹೂವಿನ ತೋಟಕ್ಕೆ ಮೊದಲನೆಯವನಾಗಿ ಹೋಗಲು ನಾನು ಯಾವಾಗಲೂ ತವಕಪಡುತ್ತಿದ್ದೆ. ಆದರೂ ಒಮ್ಮೊಮ್ಮೆ ದೊಡ್ಡವರ ನೂಕಾಟದಿಂದಾಗಿ ಹಿಂದಕ್ಕೆ ಬೀಳುತ್ತಿದ್ದೆ. ಆ ದಿನ ಮಾತ್ರ ನನಗೆ ಹೂವುಗಳು ಸಿಗುತ್ತಿರಲಿಲ್ಲ. ಹೀಗೆ ಹೂವು ಸಿಗದವರಿಗೆ ಕೊನೆಗೆ ನೆಲದಲ್ಲಿ ಹರಡಿಕೊಂಡಿದ್ದ ಪತ್ರೆ ಮಾತ್ರ ಸಿಗುತ್ತಿತ್ತು. ಪತ್ರೆಯ ಕಡೆ ಯಾರೂ ಅಷ್ಟಾಗಿ ಗಮನಕೊಡುತ್ತಿರಲಿಲ್ಲ. ಅದರಿಂದಾಗಿ ನಮ್ಮಂತಹ ಎಳೆಯರಿಗೆ ಮತ್ತು ತೀರಾ ವಯಸ್ಸಾದವರಿಗೆ ಹಸಿರು ಪತ್ರೆಯೇ ಕಾಯಂ ಆಗಿರುತ್ತಿತ್ತು. ತುಂಬಾ ಬಲಶಾಲಿ ಆದವರು ಮುನ್ನುಗ್ಗಿ ತಮ್ಮ ಬುಟ್ಟಿತುಂಬಾ ಹೂ ಕೊಯ್ದುಕೊಂಡು ಹೋಗುತ್ತಿದ್ದರೆ, ನಾನು ಅವರ ಹಿಂದೆ ಓಡಿ, 'ಅಣ್ಣಾ, ನನಗೆರಡು ಹೂ ಕೊಡು' ಎಂದು ಅಂಗಲಾಚುತ್ತಿದ್ದೆ. ಕರುಣಾಮಯಿಗಳಾದ ಅವರು ನನ್ನ ದೈನೇಸಿ ಕಣ್ಣುಗಳನ್ನು ನೋಡಿ, ಉದಾರತೆಯಿಂದ ನನ್ನ ಬುಟ್ಟಿಗೆ ಸ್ವಲ್ಪ ಹೂಗಳನ್ನು ಹಾಕಿ ಹೋಗುತ್ತಿದ್ದರು. ಹೀಗೆ ಕೇಳಿದವರಿಗೆ ಹೂ ಕೊಡುವುದು 'ಭಕ್ತಿ'ಯ ಇನ್ನೊಂದು ಭಾಗ ಎಂದು ಅವರು ಮುಗ್ಧವಾಗಿ ತಿಳಿದಿದ್ದರು.



ಪ್ರತಿ ಶನಿವಾರ ಶಾಲೆಗೆ ಹೋಗುವ ಮುನ್ನ ನಾನು ಹೂಗಳನ್ನು ಬಿಡಿಸಿತಂದು, ಮನೆಗೆ ಕೊಟ್ಟು ಸ್ಕೂಲಿಗೆ ಹೋಗಬೇಕಾಗಿತ್ತು. ಸ್ಕೂಲಿಗೆ ಹೋಗುವುದು ತಡವಾದರೂ ಮೇಷ್ಟ್ರುಗಳಿಂದ ನನಗೆ ಏಟುಗಳು ಬೀಳುತ್ತಿದ್ದವು. ಒಂದು ವೇಳೆ ಸ್ಕೂಲಿಗೆ ಹೋಗುವುದು ತಡವಾದರೂ ಪೂಜೆಗೆ ಮಾತ್ರ ಹೂಗಳನ್ನು ಸಂಗ್ರಹಿಸಿಕೊಡಲೇ ಬೇಕಿತ್ತು. ಏಕೆಂದರೆ, ನಮ್ಮ ಮನೆಯ ಶನಿವಾರದ ಪೂಜೆಯೆಂದರೆ ಅದೊಂದು ಕಠಿಣ ಬತದಂತೆ ನಡೆಯುತ್ತಿತ್ತು. ನಾವೆಲ್ಲಾ ವಾರಕ್ಕೊಮ್ಮೆ ಸ್ನಾನದವರಾಗಿದ್ದರಿಂದ, ಮನೆಯವರೆಲ್ಲರ ಸ್ನಾನ ಅಂದು ಕಡ್ಡಾಯವಾಗಿತ್ತು. ಬೆಳಗಿನಿಂದ ಕತ್ತಲಾಗುವವರೆಗೂ ಒಬ್ಬರ ನಂತರ ಒಬ್ಬರು ಸರದಿಯಂತೆ ಸ್ನಾನ ಮಾಡುತ್ತಲೇ ಇರುತ್ತಿದ್ದರು. ದೇವರಿಗೆ ಪೂಜೆ ಮಾಡುವವರು ಮಡಿಯಿಂದ ಇದ್ದು, ದೇವರ ಪೂಜೆಗೆ ಪ್ರತ್ಯೇಕ ಬಿಂದಿಗೆಯಲ್ಲಿ ನೀರು ತರಬೇಕಾಗಿತ್ತು. ಅಂದು ಇಡೀ ಮನೆಯನ್ನು ಬಗ್ಗಡದಿಂದ ಸಾರಿಸುತ್ತಿದ್ದೆವು. ಅನಂತರ ಮನೆಯಲ್ಲಿ ಸಾಲಾಗಿ ಗೋಡೆಗೆ ತೂಗುಬಿಟ್ಟಿದ್ದ ದೇವರ ಮಸಿಹಿಡಿದಿದ್ದ ಫೋಟೋಗಳನ್ನೆಲ್ಲಾ ಶುದ್ಧ ನೀರಿನಿಂದ ಒರೆಸಿ, ಅವುಗಳಿಗೆ ನಾಮ ಬಳಿದು, ಹೂವನ್ನು ಇಡುತ್ತಿದ್ದೆವು. ಇದೂ ಸಾಲದೆಂಬಂತೆ ನಮ್ಮ ಹಣೆಯ ಮೇಲೂ ಮೂರು ನಾಮ